Date : 26-9-2015

# ಒಣ ಹವಾಮಾನದಿಂದ ಜಾಗತಿಕ ಜೋಳ ಉತ್ಪಾದನೆ ಇಳಿಕೆ

ಅಂತರಾಷ್ಟ್ರೀಯ ಗ್ರೈನ್ಸ್ ಕೌನ್ಸಿಲ್ ಅಂದಾಜಿನ ಪ್ರಕಾರ ಜೋಳ ದಾಸ್ತಾನು ಈ ವರ್ಷದ ಅಂತ್ಯದ ವೇಳೆ (1 ಮಿಲಿಯನ್ ಟನ್ ಹೆಚ್ಚಳಗೊಳಿಸಿ) 199 ಎಮ್. ಟನ್‌ಗಳಾಗಬಹುದೆನ್ನಲಾಗಿದೆ. ಇದು ಹಿಂದಿನ ಈ ವರ್ಷದ ದಾಸ್ತಾನಿಗಿಂತ 4 ಎಂ.ಟನ್ ಕಡಿಮೆಯಾಗಿದೆ. ಯುರೋಪಿನ ರೈತರು ಜೋಳದ ಬದಲು ಮೇವಿಗೆ ಗೋಧಿ ಉಪಯೋಗಿಸುವ ಊಹೆಯಿಂದ ಜೋಳದ ದಾಸ್ತಾನು ಒಂದು ಮಿಲಿಯನ್ ಟನ್ ಹೆಚ್ಚಳವಾಗಿ ಅಂದಾಜಿಸಿದೆ. ಒಟ್ಟು ಜಾಗತಿಕ ಧಾನ್ಯಗಳ ದಾಸ್ತಾನು 2015–16 ರ ಅಂತ್ಯದಲ್ಲಿ ಗೋಧಿ ದಾಸ್ತಾನು ಹೆಚ್ಚಳದ ಅಂದಾಜಿನಿಂದ, 9 ಎಂ ಟನ್ ಹೆಚ್ಚಳಗೊಳಿಸಿ 450 ಎಂ ಟನ್‌ಗಳಾಗಬಹುದೆಂದು ಐಜಿಸಿ ಅಂದಾಜಿಸಿದೆ. ಇದು ಹಿಂದಿನ 29 ವರ್ಷಗಳಲ್ಲೇ ಹೆಚ್ಚಿನ ದಾಸ್ತಾನಾಗಿದೆ. ಜಾಗತಿಕ ಜೋಳ ಉತ್ಪಾದನೆ ಐಜಿಸಿ ಅಂದಾಜಿನ ಪ್ರಕಾರ 967 ಎಂ ಟನ್‌ಗಳಾಗಬಹುದೆನ್ನಲಾಗಿದ್ದು, ಇದು ಹಿಂದಿನ ವರ್ಷಕ್ಕಿಂತ 38ಎಂ ಟನ್ ಕಡಿಮೆಯಾಗಲಿದೆ.